# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 5/2026**

**CW : 01 PW: 01**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 15.04.2026**

| | |
|---|---|
| ಹೆಸರು | : ವಿಷ್ಣು ರಾಠೋಡ |
| ತಂದೆಯ ಹೆಸರು | : ಹರಿಲಾಲ |
| ವಯಸ್ಸು | : 43 |
| ಉದ್ಯೋಗ | : ಗೌಂಡಿ |
| ವಾಸಸ್ಥಳ | : ಸೇವಾ ನಗರ , ಥರಿ ತಾಂಡ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ-2 ಮತ್ತು 3 ಇವರ ಪರಿಚಯ ನನಗೆ ಇರುವುದಿಲ್ಲ. ಚಾಸಾ-4 ನನ್ನ ತಮ್ಮ, ಚಾಸಾ-5 ನನ್ನ ಅಣ್ಣ, ಚಾಸಾ-6 ನನ್ನ ತಮ್ಮನ ಹೆಂಡತಿ. ಆರೋಪಿತರ ಪರಿಚಯ ನನಗೆ ಇರುವುದಿಲ್ಲ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವೈಯುಕ್ತಿಕ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈಯಲ್ಲಿದ್ದ ಖಡ್ಗದಿಂದ ಹೊಡೆದು ರಕ್ತಗಾಯ ಮತ್ತು ಗಟ್ಟಿಗಾಯ ಮಾಡಿ ಹಾಗೂ ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಎಂದು ನಾನು ದೂರು ಹಾಗೂ ಹೇಳಿಕೆ ನೀಡಿರುವುದಿಲ್ಲ. ಪೋಲೀಸರಿಗೆ ಯಾವುದೇ ಪಂಚನಾಮೆಗೆ ಜಾಗೆಯನ್ನು ತೋರಿಸಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದಿ ಫಿರ್ಯಾದಿಯಾಗಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಎ) ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.1 ರಲ್ಲಿರುವ ಅಂಶಗಳ ಬಗ್ಗೆ ಮಾಹಿತಿ ಇರುವುದಿಲ್ಲ.

ಒಂದು ಭಾವಚಿತ್ರವನ್ನು ತೋರಿಸಲಾಗಿ, ನಿ.ಪಿ.2 ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.2 ರಂತೆ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 19/11/2025 ರಂದು ರಾತ್ರಿ 6.30 ರ ಸುಮಾರಿಗೆ ಚಾಸಾ-4 ರವರು ನನಗೆ ಫೋನ್ ಮಾಡಿ ಫೋಟೋ ಸ್ಟುಡಿಯೋದಲ್ಲಿದ್ದ ಚಾಸಾ-4 ರವರಿಗೆ ಆರೋಪಿತರು ತಡೆದು ನಿಲ್ಲಿಸಿ ಅವಾಚ್ಯವಾಗಿ ಬೈದು, ಕೈಯಿಂದ ಮತ್ತು ಕೈಯಲ್ಲಿರುವ ಖಡ್ಗದಿಂದ ಹೊಡಿಬಡಿ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆತ ನಾನು ಚಾಸಾ-5, 6 ಕೂಡಿಕೊಂಡು ಭಂಕೂರ ಕ್ರಾಸ ಗೆ ಬಂದಿರುತ್ತೇವೆ ಎಂದರೆ

ಸರಿಯಲ್ಲ. ಚಾಸಾ-4 ರವರಿಗೆ ಕೈಗೆ ಮತ್ತು ಮೈಗೆ ತರಚಿದ ಗಾಯ ಮತ್ತು ಕಂದುಗಟ್ಟಿದ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಈ ಕುರಿತು ಚಾಸಾ-4 ರವರಿಗೆ ಶಹಾಬಾದ ಸರ್ಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹೆಚ್ಚಿನ ಉಪಚಾರ ಕುರಿತು ಚಾಸಾ-4 ರವರಿಗೆ ಜಿಲ್ಲಾಸ್ಪತ್ರೆ ಕಲಬುರಗಿಗೆ ಸೇರಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಈ ಘಟನೆ ಕುರಿತು ನಾನು ನಿ.ಪಿ.1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.2 ರಂತೆ ಪೋಲೀಸರಿಗೆ ಪಂಚನಾಮೆಗೆ ಜಾಗೆಯನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ದಿ: 20/11/2025 ರಂದು ಪೋಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ, ಈಗ ಓದಿ ಹೇಳಲಾದ ಹೇಳಿಕೆಯನ್ನು ಸಾಕ್ಷಿಯು ಅಲ್ಲಗಳೆದಿದ್ದು, ಅದನ್ನು ನಿ.ಪಿ.3 ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.1 ರಿಂದ 3 ರಲ್ಲಿರುವ ಅಂಶಗಳು ತಿಳಿದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಹಿರಿಯರ ಮಧ್ಯಸ್ಥಿಕೆಯಿಂದ ನಾನು ಈ ಪ್ರಕರಣವನ್ನು ಮುಂದುವರೆಸಲು ಇಷ್ಟಪಡುವುದಿಲ್ಲ, ಆರೋಪಿತರ ನಡುವೆ ರಾಜಿ ಮಾಡಿಕೊಂಡಿರುವ ಕಾರಣ ನಾನು ಇದನ್ನು ಇಲ್ಲೇ ಇತ್ಯರ್ಥ ಪಡಿಸಿಕೊಳ್ಳುವುದಾಗಿ ಸಾಕ್ಷಿದಾರರು ಸ್ವ ಇಚ್ಛೆಯಾಗಿ ನುಡಿದಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**